# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.

## ಸಿ.ಸಿ. ನಂ. 1698/2022

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಜಿ.ಎಸ್. ತಿಪ್ಪೇಸ್ವಾಮಿ | ಸಿ.ಡಬ್ಲ್ಯೂ –19 |
| ತಂದೆ ಹೆಸರು | : | ಎಸ್. ಸಣ್ಣನುಂಕಪ್ಪ | ಪಿ.ಡಬ್ಲ್ಯೂ –08 |
| ವಯಸ್ಸು | : | 54 ವರ್ಷ | |
| ಉದ್ಯೋಗ | : | ಡಿ ವೈ ಎಸ್ ಪಿ | |
| ವಾಸಸ್ಥಳ | : | ಚಿಕ್ಕಮಂಗಳೂರು | ದಿಃ 06–08–2025. |

## ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ

ಜನವರಿ 2021 ರಿಂದ ಜುಲೈ 2022 ರವರೆಗೆ ನಾನು ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಪಿ ಐ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 25.04.2022 ರಂದು ಚಾಸಾ–17 ರವರಿಂದ ಕಡತವನ್ನು ಸ್ವೀಕರಿಸಿ ಪರಿಶೀಲಿಸಿರುತ್ತೇನೆ. ಅದೇ ದಿನ ಚಾಸಾ–1 ರವರ ಮರು ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಚಾಸಾ –9 ರಿಂದ 11 ರವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಚಾಸಾ–14 ರಿಂದ 16 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ನನಗೆ ವರ್ಗಾವಣೆಯಾದ ಹಿನ್ನಲೆಯಲ್ಲಿ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ–20 ರವರಿಗೆ ಹಸ್ತಾಂತರಿಸಿರುತ್ತೇನೆ.

## ಪಾಟೀ ಸವಾಲುಃ ಶ್ರೀ ಬಿ ಸಿ ಬಿ , ಆರೋಪಿ ಪರ ವಕೀಲರಿಂದಃ

ದಿನಾಂಕಃ 25.04.2022 ರಂದು ಚಾಸಾ–17 ರವರಿಂದ ಕಡತವನ್ನು ಸ್ವೀಕರಿಸುವ ಸಂದರ್ಭದಲ್ಲಿ ಸುಳ್ಳು ಪ್ರಕರಣ ಎಂದು ಗೊತ್ತಿದ್ದರು ಕಡತವನ್ನು ಸ್ವೀಕರಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಮರು ಹೇಳಿಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರ ಮರು ಹೇಳಿಕೆಯಲ್ಲಿ ದಿನಾಂಕ 06.02.2022 ರಂದು ಸ್ಥಳ ಮಹಜರನ್ನು ಜರುಗಿಸಲಾಗಿರುತ್ತದೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ. ಸುಳ್ಳು ಪರಕರಣ ಎಂದು ಗೊತ್ತಿದ್ದರೂ ಸಹಾ ಆರೋಪಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ